ವಿಷಯ: ಬೆಂಗಳೂರು ಮಹಾನಗರ ಪಾಲಿಕೆಯಿಂದ ರೆವಿನ್ಯೂ ಮನೆಗಳಿಗೆ ಖಾತಾ ನೀಡುವ ಬಗ್ಗೆ.

902 (1234)

ಶ್ರೀ ಎನ್.ರಾಜಣ್ಣ, (ಭಾರತೀನಗರ): ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆ ಹೊಸದಾಗಿ ಎಷ್ಟು ಕಂದಾಯ ಪ್ರದೇಶಗಳನ್ನು ಸೇರಿಸಿಕೊಳ್ಳಲಾಗಿದೆ?

ಆ) ಈ ಪ್ರದೇಶಗಳಲ್ಲಿರುವ ರೆವಿನ್ಯೂ ನಿವೇಶನಗಳು ಹಾಗೂ ಮನೆಗಳ ಸಂಖ್ಯೆ ಎಷ್ಟು?

ಇ) ಈ ಮನೆಗಳಿಗೆ ಬೆಂಗಳೂರು ಮಹಾನಗರಪಾಲಿಕೆಯು ಖಾತಾ ನೀಡಲು ಅಭಿವೃದ್ಧಿ ಶುಲ್ಕವನ್ನು ನಿಗಧಿಪಡಿಸಿದೆಯೇ?

ಈ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಎಷ್ಟು ರೆವಿನ್ಯೂ ಮನೆ ಮಾಲೀಕರು ಅಭಿವೃದ್ಧಿ ಶುಲ್ಕವನ್ನು ಪಾವತಿ ಮಾಡಿ ಖಾತವನ್ನು ಪಡೆದಿರುತ್ತಾರೆ?

ಉ) ಅಭಿವೃದ್ಧಿ ಶುಲ್ಕವನ್ನು ಪಾವತಿ ಮಾಡಲು ನೀಡುವ ಅರ್ಜಿಗೆ ಹಾಗೂ ಈ ಹಣವನ್ನು ಪಾವತಿ ಮಾಡಿ ಖಾತಾ ಪಡೆಯಲು ಈ ಮನೆ ಮಾಲೀಕರು ಸಾವಿರಾರು ರೂ.ಗಳನ್ನು ನೀಡಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೇ?

ಊ) ಈ ಲಂಚದ ಹಾವಳಿಯನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಋ) ಈ ಪದ್ಧತಿಯನ್ನು ಸರಳೀಕರಣಗೊಳಿಸಿ ಅರ್ಜಿದಾರರೇ ಸ್ವಯಂ ಘೋಷಿತ ಅರ್ಜಿಗಳನ್ನು ನೀಡಿ ಅಭಿವೃದ್ಧಿ ಶುಲ್ಕವನ್ನು ಪಾವತಿ ಮಾಡಿ ಖಾತಾವನ್ನು ಪಡೆಯುವ ಪದ್ಧತಿಯನ್ನು ಸರ್ಕಾರ ಜಾರಿಗೊಳಿಸುತ್ತದೆಯೇ?

ಶ್ರೀ ಅನಂತ್‌ನಾಗ್ (ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು):

ಅ) 189 ಪ್ರದೇಶಗಳು ಹೊಸದಾಗಿ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಸೇರಿಸಲ್ಪಟ್ಟಿವೆ.

ಆ) ಸುಮಾರು 1.04 ಲಕ್ಷ ಸ್ವತ್ತುಗಳು (ನಿವೇಶನಗಳು: ಮನೆಗಳು) ಬರುತ್ತವೆ.

ಇ) ಹೌದು.

ಈ) ಇಲ್ಲಿಯವರೆಗೆ (31-3-1998ರ ವರೆಗೆ) 20,258 ಮನೆಗಳ ಮಾಲೀಕರು ಮೇಲ್ಚಾಟು ವೆಚ್ಚ ಪಾವತಿ ಮಾಡಿ ಖಾತೆಗಳನ್ನು ಪಡೆದಿರುತ್ತಾರೆ.

ಉ) ಹೌದು.

ಊ) ಶ್ರೀ ಈಶ್ವರ್ ಭಟ್ ನಿವೃತ್ತ ಜಿಲ್ಲಾ ನ್ಯಾಯಾಧೀಶರ ದೂರುಗಳ ಬಗ್ಗೆ ವಿಚಾರಣೆ ನಡೆಸಿ ವರದಿ ನೀಡಲು ಬೆಂಗಳೂರು ಮಹಾನಗರ ಪಾಲಿಕೆ ನೇಮಕ ಮಾಡಿದೆ. ಆ ವರದಿಯನ್ನು ಆಧರಿಸಿ, ತಪ್ಪಿತಸ್ಥ ನೌಕರರ ವಿರುದ್ಧ ಇಲಾಖಾ ವಿಚಾರಣೆ ಮಾಡಲಾಗುವುದು.

ಋ) ಅಭಿವೃದ್ಧಿ ಶುಲ್ಕ ಪಾವತಿ ಪದ್ಧತಿಯನ್ನು ಸರಳೀಕರಿಸಿ ಅರ್ಜಿದಾರರೇ ನಿವೇಶನಗಳ ಅಳತೆಯ ಪ್ರಕಾರ ಚದುರಗಜ ಒಂದಕ್ಕೆ ರೂ. 100.00ರಂತೆ ಲೆಕ್ಕ ಹಾಕಿ ಬೆಂಗಳೂರು ವಿಜಯಬ್ಯಾಂಕಿನ ಯಾವುದೇ ಶಾಖೆಯಲ್ಲಿ ಪಾವತಿ ಮಾಡಿ ಚಲನ್ನಿನೊಡನೆ ಖಾತೆಗಾಗಿ ಅರ್ಜಿಯನ್ನು ದಾಖಲೆಗಳೊಂದಿಗೆ ಸಲ್ಲಿಸಬಹುದಾಗಿದೆ.

ವಿಷಯ: ಸಜೀವ ಮುನ್ನೂರು ಏತ ನೀರಾವರಿ ಯೋಜನೆ.

903 (1229)

ಶ್ರೀ ಎ.ರುಕ್ಮಯ ಪೂಜಾರಿ (ಪಿಟ್ಲ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಜೀವ ಮುನ್ನೂರು ಏತ ನೀರಾವರಿ ಯೋಜನೆ ಯಾವಾಗ ಪ್ರಾರಂಭವಾಗಿದೆ?

ಆ) ಸದರಿ ಯೋಜನೆಯಿಂದ ಎಷ್ಟು ಎಕ್ರೆ ಜಮೀನಿಗೆ ನೀರು ಒದಗಿಸಬೇಕಾಗಿತ್ತು, ಈಗ ಎಷ್ಟು ಎಕ್ರೆ ಜಮೀನಿಗೆ ನೀರು ಒದಗಿಸಲಾಗುತ್ತಿದೆ; ಇದಕ್ಕೆ ಕಾರಣಗಳೇನು?

ಇ) ಹೆಚ್ಚು ಜಮೀನಿಗೆ ನೀರು ಒದಗಿಸಲು ರೈತರಿಂದ ಬೇಡಿಕೆಗಳು ಬಂದಿದೆಯೇ?

ಈ) ಬಂದಿದ್ದಲ್ಲಿ ಸರಕಾರ ಏನು ಕ್ರಮ ತೆಗೆದುಕೊಳ್ಳುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ) ಸಜೀವ ಮೂನ್ನೂರು ಏತ ನೀರಾವರಿ ಯೋಜನೆಯನ್ನು 1969-70ನೇ ಸಾಲಿನಲ್ಲಿ ಪ್ರಾರಂಭವಾಗಿದೆ.

ಆ) ಸದರಿ ಯೋಜನೆಯಿಂದ 205 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದ್ದು, ಈಗ ಸದರಿ ಯೋಜನೆಯು ದುರಸ್ತಿಯಲ್ಲಿರುವುದರಿಂದ,